# ಕರ್ನಾಟಕ ಲೋಕಾಯುಕ್ತ

ನಂ. ಕಂಪ್ಲೆಂಟ್/ಉಪಲೋಕ್/ಬಿಡಿ/1813/2021
ಪಿ.ಓ. ಎಆರ್ಇ-06 (ಮಂಡನಾಧಿಕಾರಿಗಳ ಶಾಖೆ)

ಬಹುಮಹಡಿಗಳ ಕಟ್ಟಡ,
ಡಾ: ಬಿ.ಆರ್. ಅಂಬೇಡ್ಕರ್ ವೀದಿ,
ಬೆಂಗಳೂರು, ದಿನಾಂಕ: 09/12/2021.

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 12(3) ರ ಅನ್ವಯ ಶಿಫಾರಸ್ಸು ವರದಿ

ವಿಷಯ: **ಶ್ರೀ. ಸುಬ್ರಮಣಿ ಬಿನ್ ಶ್ರೀ. ನಾರಾಯಣಪ್ಪ, ಕಿರಿಯ ಆರೋಗ್ಯ ನಿರೀಕ್ಷಕರು (ಹೆಲ್ತ್ ಇನ್ಸ್‌ಪೆಕ್ಟರ್) (ನಿಯೋಜನೆ ಮೇರೆಗೆ), ಬಂಗಾರಪೇಟೆ ಪುರಸಭಾ ಕಾರ್ಯಾಲಯ, ಬಂಗಾರಪೇಟೆ, ಕೋಲಾರ ಜಿಲ್ಲೆ, ಮಾತೃ ಇಲಾಖೆ:- ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆರವರು ದುರ್ನಡತೆ / ದುರ್ವರ್ತನೆ ತೋರಿದ ಬಗ್ಗೆ.**

******

1. ಕೋಲಾರ ಭ್ರಷ್ಟಾಚಾರ ನಿಗ್ರಹ ದಳ ಪೋಲಿಸ್ ಠಾಣೆಯ ಪೋಲಿಸ್ ನಿರೀಕ್ಷಕರು, (ಇನ್ನು ಮುಂದೆ 'ತನಿಖಾಧಿಕಾರಿ' ಎಂದು ಕರೆಯಲ್ಪಡುತ್ತಾರೆ) ತನಿಖಾ ವರದಿ ಮತ್ತು ಸಂಬಂಧಿಸಿದ ದಾಖಲೆಗಳೊಂದಿಗೆ ಸಲ್ಲಿಸಿದ ವರದಿಯಲ್ಲಿ **ಶ್ರೀ. ಸುಬ್ರಮಣಿ ಬಿನ್ ಶ್ರೀ. ನಾರಾಯಣಪ್ಪ, ಕಿರಿಯ ಆರೋಗ್ಯ ನಿರೀಕ್ಷಕರು (ಹೆಲ್ತ್ ಇನ್ಸ್‌ಪೆಕ್ಟರ್) (ನಿಯೋಜನೆ ಮೇರೆಗೆ), ಬಂಗಾರಪೇಟೆ ಪುರಸಭಾ ಕಾರ್ಯಾಲಯ, ಬಂಗಾರಪೇಟೆ, ಕೋಲಾರ ಜಿಲ್ಲೆ, ಮಾತೃ ಇಲಾಖೆ:- ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ** (ಇನ್ನು ಮುಂದೆ 'ಎದುರುದಾರರು' ಎಂದು ಕರೆಯಲ್ಪಡುತ್ತಾರೆ), **ಶ್ರೀ. ಶ್ರೀನಿವಾಸ ಪ್ರಸಾದ್ ಬಿನ್ ಲೇಟ್ ವೆಂಕಟೇಶಗೌಡ** (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ). ಇವರು ಎದುರುದಾರರನ್ನು ಅವರ ಕೆಲಸದ ನಿಮಿತ್ತ ಭೇಟಿಮಾಡಿದಾಗ ಎದುರುದಾರರು ಲಂಚದ ಹಣಕ್ಕೆ ಬೇಡಿಕೆ ಇಟ್ಟು ಅದನ್ನು ಪಡೆದು ದುರ್ನಡತೆ ತೋರಿಸಿರುವುದು ಕಂಡುಬಂದಿದ್ದರಿಂದ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 7(2)ರಡಿಯಲ್ಲಿ ತನಿಖೆ ಕೈಗೊಂಡಿದೆ.

2. **ಪ್ರಕರಣದ ಸಂಕ್ಷಿಪ್ತ ಸಾರಾಂಶ:-**

i) ದೂರುದಾರರಾದ **ಶ್ರೀ. ಶ್ರೀನಿವಾಸ ಪ್ರಸಾದ್ ಬಿನ್ ಲೇಟ್ ವೆಂಕಟೇಶಗೌಡ** ರವರು ಲೈಸನ್ಸ್ ಹೊಂದಿ ಪ್ಲಂಬಿಂಗ್ ಕಂಟ್ರ್ಯಾಕ್ಟರ್ ಕೆಲಸ ಮಾಡುತ್ತಿದ್ದು, ಹಾಲಿ ಈ ಸಾಲಿನ ಲೈಸನ್ಸ್ ರಿನ್ಯೂವಲ್ ಮಾಡಿಸಬೇಕಾಗಿದ್ದು, ಆ ಬಗ್ಗೆ ದೂರುದಾರರು ಕೆಲವು ತ ದಿನಗಳ ಹಿಂದೆ

ಎದುರುದಾರರ ಕಚೇರಿಗೆ ಬಂದು ಲೈಸನ್ಸ್ ರೆನ್ಯೂವಲ್ ಮಾಡಿಕೊಡುವಂತೆ ಕೇಳಿದಾಗ, ಎದುರುದಾರರು 5,000/- ರೂ. ಲಂಚದ ಹಣ ಕೊಟ್ಟರೆ, ಲೈಸನ್ಸ್ ರಿನ್ಯೂವಲ್ ಮಾಡಿಕೊಡುವುದಾಗಿ ತಿಳಿಸಿದ್ದು, ದಿ: 21/05/2018 ರಂದು ಬೆಳಿಗ್ಗೆ ದೂರುದಾರರು ಎದುರುದಾರರನ್ನು ಭೇಟಿಮಾಡಿ ಅವರ ಕೆಲಸವಾದ ಲೈಸನ್ಸ್ ರಿನ್ಯೂವಲ್ ಮಾಡಿಕೊಡುವಂತೆ ಕೇಳಿದಾಗ, ಲೈಸನ್ಸ್ ರಿನ್ಯೂವಲ್‌ಗೆ 2,636/- ರೂ. ಆಗುತ್ತದೆ ಎಂದು ಎದುರುದಾರರು ತಿಳಿಸಿರುತ್ತಾರೆ. ಆಗ ದೂರುದಾರರು ಚಲನ್ ಎಷ್ಟು ಕಟ್ಟಬೇಕು ಎಂದು ಕೇಳಿದ್ದಕ್ಕೆ, 1,636/- ರೂ. ಚಲನ್ ಮತ್ತು 1,000/- ರೂ. ಎಕ್ಸ್‌ಟ್ರಾ ಲೈಸನ್ಸ್ ಫೀಸಾಗುತ್ತದೆ ಎಂದು ಎದುರುದಾರರು ತಿಳಿಸಿರುತ್ತಾರೆ. ಆಗ ದೂರುದಾರರು ಎದುರುದಾರರ ಜೊತೆ ಮಾತನಾಡಿದ ಸಂಭಾಷಣೆಯನ್ನು ಅವರ ಮೊಬೈಲ್‌ನಲ್ಲಿ ಧ್ವನಿಮುದ್ರಿಸಿಕೊಂಡಿರುತ್ತಾರೆ. ದೂರುದಾರರಿಗೆ ಲಂಚದ ಹಣಕೊಡಲು ಇಷ್ಟವಿಲ್ಲದ್ದರಿಂದ, ದೂರುದಾರರು ದಿ: 21/05/2018ರಂದು ಕೋಲಾರ ಭ್ರಷ್ಟಾಚಾರ ನಿಗ್ರಹದಳ ಠಾಣೆಯ ಆರಕ್ಷಕ ನಿರೀಕ್ಷಕರಿಗೆ ಲಿಖಿತ ದೂರನ್ನು ಮತ್ತು ಸಂಭಾಷಣೆಗಳನ್ನು ಧ್ವನಿಮುದ್ರಿಸಿಕೊಂಡಿದ್ದ ಮೊಬೈಲನ್ನು ನೀಡಿದ್ದು, ಸದರಿ ಠಾಣೆಯ ಠಾಣಾಧಿಕಾರಿಗಳು ಅವರ ಠಾಣೆಯ ಗುನ್ನೆ ನಂ.08/2018 ರಲ್ಲಿ ಕಲಂ 7, 13(1)(ಡಿ) ರೆ/ವಿ. 13(2) ಭ್ರಷ್ಟಾಚಾರ ನಿಗ್ರಹ ಕಾಯ್ದೆ 1988 ರಡಿಯಲ್ಲಿ ಎದುರುದಾರರ ವಿರುದ್ಧ ಪ್ರಕರಣ ಧಾಖಲಿಸಿಕೊಂಡಿರುತ್ತಾರೆ.

ii) ದಿ: 21/05/2018 ರಂದು ಜಪ್ತಿಪೂರ್ವದ ಪಂಚನಾಮೆಯ ಸಮಯದಲ್ಲಿ ತನಿಖಾಧಿಕಾರಿಗಳು ಇಬ್ಬರು ಪಂಚರನ್ನು ಠಾಣೆಗೆ ಕರೆಯಿಸಿ ದೂರುದಾರರನ್ನು ಪರಿಚಯಿಸಿ, ಪಂಚರಿಗೆ ದೂರಿನ ಸಂಕ್ಷಿಪ್ತ ಮಾಹಿತಿಯನ್ನು ನೀಡಿದ ನಂತರ, ದೂರುದಾರರು ಎದುರುದಾರರ ಜೊತೆ ಮಾತನಾಡಿದಾಗ, ಲಂಚದ ಹಣಕ್ಕೆ ಬೇಡಿಕೆ ಇಟ್ಟ ಸಂಭಾಷಣೆಯನ್ನು ದೂರುದಾರರು ಅವರ ಮೊಬೈಲ್‌ನಲ್ಲಿ ಧ್ವನಿಮುದ್ರಿಸಿಕೊಂಡಿದ್ದ ಮೊಬೈಲ್‌ನ್ನು ಹಾಜರುಪಡಿಸಿದ್ದು, ಅದರಲ್ಲಿರುವ ಸಂಭಾಷಣೆಗಳನ್ನು ಪಂಚಸಾಕ್ಷಿದಾರರಿಗೆ ಕೇಳಿಸಿದ ನಂತರ ಅವರು ಪಂಚರಾಗಿ ಸಹಕರಿಸಲು ಒಪ್ಪಿಕೊಂಡಿರುತ್ತಾರೆ. ತನಿಖಾಧಿಕಾರಿಯವರು ದೂರುದಾರರ ಮೊಬೈಲ್‌ನಲ್ಲಿ ಧ್ವನಿಮುದ್ರಿಸಿಕೊಂಡಿದ್ದ ಸಂಭಾಷಣೆಯನ್ನು ಪಂಚನಾಮೆಯಲ್ಲಿ ಲಿಪಿಕರಣಗೊಳಿಸಿ, ಲ್ಯಾಪ್‌ಟಾಪ್ ಮೂಲಕ ಸಂಭಾಷಣೆಯನ್ನು ಸಿ.ಡಿ.ಗಳಿಗೆ ವರ್ಗಾಯಿಸಿ, ಸಿ.ಡಿ.ಗಳನ್ನು ವಶಕ್ಕೆ ಪಡೆದು, ದೂರುದಾರರು ಹಾಜರುಪಡಿಸಿದ (500/- ರೂ. ಮುಖಬೆಲೆಯ 5 ನೋಟುಗಳು ಮತ್ತು 100/- ರೂ. ಮುಖಬೆಲೆಯ 1 ನೋಟು, 20/- ರೂ. ಮುಖಬೆಲೆಯ 2 ನೋಟು) ಒಟ್ಟು 2,640/- ರೂ.ಗಳನ್ನು ಹಾಜರುಪಡಿಸಿದ

ನಂತರ, ತನಿಖಾಧಿಕಾರಿಯವರ ಸೂಚನೆ ಮೇರೆಗೆ ಪಂಚಸಾಕ್ಷಿ-2 ರವರು ಸದರಿ ನೋಟುಗಳ ವಿವರಗಳನ್ನು ತಿಳಿಸಿದ ಮೇರೆಗೆ ಬಿಳಿ ಹಾಳೆಯಲ್ಲಿ ಮತ್ತು ಸಿಬ್ಬಂದಿಯು ಪಂಚನಾಮೆಯಲ್ಲಿ ನಮೂದಿಸಿರುತ್ತಾರೆ. ತದನಂತರ, ತನಿಖಾಧಿಕಾರಿಯವರು ಸಿಬ್ಬಂದಿ ಮುಖಾಂತರ ಸದರಿ ನೋಟುಗಳಿಗೆ ಫಿನಾಪ್ತಲಿನ್ ಪುಡಿಯನ್ನು ಲೇಪಿಸಿ, ಪುಡಿಲೇಪಿತ ನೋಟುಗಳನ್ನು ಪಂಚಸಾಕ್ಷಿ-2 ರವರಿಗೆ ನೀಡಿ ಆ ನೋಟುಗಳನ್ನು ದೂರುದಾರರ ಶರ್ಟಿನ ಎಡ ಜೇಬಿನಲ್ಲಿ ಇಡಿಸಿರುತ್ತಾರೆ. ನಂತರ, ತನಿಖಾಧಿಕಾರಿಯವರು ದೂರುದಾರರಿಗೆ ಎದುರುದಾರರ ಬಳಿ ಹೋಗಿ ಕೆಲಸದ ಬಗ್ಗೆ ಕೇಳುವಂತೆ, ಆಗ ಎದುರುದಾರರು ಲಂಚದ ಹಣಕ್ಕಾಗಿ ಒತ್ತಾಯ ಮಾಡಿದರೆ, ಪುಡಿಲೇಪಿತ ನೋಟುಗಳನ್ನು ಅವರಿಗೆ ಕೊಡುವಂತೆ, ಹಾಗೆ ಕೊಟ್ಟಾಗ ಅವರು ಅದನ್ನು ಯಾವರೀತಿ ಪಡೆದುಕೊಳ್ಳುತ್ತಾರೆ, ಎಲ್ಲಿ ಇಟ್ಟುಕೊಳ್ಳುತ್ತಾರೆ ಎಂಬುದನ್ನು ಗಮನಿಸಿ, ನಂತರ ಕಚೇರಿಯಿಂದ ಹೊರಬಂದು ದೂರುದಾರರು ಅವರ ಬಲಗೈನಿಂದ ತಲೆಯನ್ನು ಸವರಿಕೊಳ್ಳುವುದರ ಮೂಲಕ ಸನ್ನೆ ಮಾಡಬೇಕೆಂದು ಸೂಚಿಸಿರುತ್ತಾರೆ ಮತ್ತು ನೆರಳುಸಾಕ್ಷಿದಾರರಿಗೆ ದೂರುದಾರರ ಮತ್ತು ಎದುರುದಾರರ ನಡುವೆ ನಡೆಯುವ ವಿದ್ಯಮಾನಗಳನ್ನು ಗಮನಿಸುವಂತೆ ತಿಳಿಸಿರುತ್ತಾರೆ ಹಾಗೂ ದೂರುದಾರರಿಗೆ ಒಂದು ಧ್ವನಿಮುದ್ರಕವನ್ನು ನೀಡಿ ಎದುರುದಾರರ ಬಳಿ ಹೋಗುವಾಗ ಚಾಲನಾ ಸ್ಥಿತಿಯಲ್ಲಿ ಇಟ್ಟುಕೊಳ್ಳುವಂತೆ ಮತ್ತು ಅಲ್ಲಿ ನಡೆಯುವ ಸಂಭಾಷಣೆಯನ್ನು ಮುದ್ರಣಮಾಡಿಕೊಳ್ಳುವಂತೆ ತನಿಖಾಧಿಕಾರಿಯವರು ಸೂಚಿಸಿರುತ್ತಾರೆ. ಇತರೆ ಎಲ್ಲಾ ಔಚಿತ್ಯಪೂರ್ವ ನಡವಳಿಕೆಗಳನ್ನು ದೂರುದಾರರು, ನೆರಳುಸಾಕ್ಷಿ, ಹಾಗೂ ಪಂಚರ ಸಮಕ್ಷಮ ನಿರ್ವಹಿಸಿರುತ್ತಾರೆ.

iii) ದಿ: 21/05/2018ರಂದು ದೂರುದಾರರು, ನೆರಳುಸಾಕ್ಷಿ ಮತ್ತು ಪಂಚಸಾಕ್ಷಿ ಹಾಗೂ ಸಿಬ್ಬಂದಿಗಳೊಂದಿಗೆ ತನಿಖಾಧಿಕಾರಿಯವರು ಎದುರುದಾರರ ಕಛೇರಿ ಬಳಿ ಬಂದಿರುತ್ತಾರೆ. ಅಂದು ಸಂಜೆ ಸುಮಾರು 4.40ರ ಗಂಟೆ ಸಮಯದಲ್ಲಿ ದೂರುದಾರರು ನೆರಳುಸಾಕ್ಷಿಯೊಂದಿಗೆ ಎದುರುದಾರರ ಬಳಿ ಬಂದು ಅವರ ಕೆಲಸವಾದ ಲೈಸನ್ಸ್ ರಿನ್ಯೂವಲ್ ಮಾಡಿಕೊಡುವಂತೆ ಕೇಳಿದಾಗ, ಎದುರುದಾರರು ಬೆಳಿಗ್ಗೆ ಬೇಡಿಕೆಯಿಟ್ಟಿರುವಂತೆ ಹಣ ತಂದಿದ್ದೀರಾ ಎಂದು ಕೇಳಿ, ದೂರುದಾರರು ನೆರಳುಸಾಕ್ಷಿ ಸಮಕ್ಷಮ 2,640/- ರೂ.ಗಳನ್ನು ಎದುರುದಾರರಿಗೆ ನೀಡಿರುತ್ತಾರೆ. ಎದುರುದಾರರು ಆ ಹಣವನ್ನು ಬಲಗೈನಿಂದ ಸ್ವೀಕರಿಸಿ ಎರಡೂ ಕೈಗಳಿಂದ ಎಣಿಸಿ, ಎದುರುದಾರರ ಪ್ಯಾಂಟಿನ ಬಲಭಾಗದ ಜೇಬಿನಲ್ಲಿ ಇಟ್ಟುಕೊಂಡಿದ್ದು, ನಂತರ ದೂರುದಾರರು ಅವರ ಬಲಗೈನಿಂದ ತಲೆಯನ್ನು ಸವರಿಕೊಳ್ಳುವ ಮೂಲಕ ತನಿಖಾಧಿಕಾರಿಗಳಿಗೆ ಕಾಣುವಂತೆ ಸನ್ನೆ ಮಾಡಿರುತ್ತಾರೆ. ಆಗ ತನಿಖಾಧಿಕಾರಿಗಳು, ಪಂಚಸಾಕ್ಷಿ ಮತ್ತು ಸಿಬ್ಬಂದಿಗಳೊಂದಿಗೆ ಧಾವಿಸಿ

ದೂರುದಾರರು ಎದುರುದಾರರ ಕಚೇರಿಯ ಗಣಕಯಂತ್ರದ ಕೊಠಡಿಯಲ್ಲಿ ಕುಳಿತಿದ್ದ ಎದುರುದಾರರನ್ನು ತೋರಿಸಿದ್ದು, ಆಗ ತನಿಖಾಧಿಕಾರಿಯು ಎದುರುದಾರರನ್ನು ವಶಕ್ಕೆ ಪಡೆದು, ಸಿಬ್ಬಂದಿಗಳ ಸಹಾಯದಿಂದ ಸೋಡಿಯಂ ಕಾರ್ಬೋನೇಟ್ ದ್ರಾವಣವನ್ನು ತಯಾರಿಸಿ, ಎರಡು ಬಟ್ಟಲುಗಳಲ್ಲಿ ದ್ರಾವಣವನ್ನು ಪಡೆದುಕೊಂಡು, ಒಂದು ಬಟ್ಟಲಿನಲ್ಲಿದ್ದ ದ್ರಾವಣದಲ್ಲಿ ಎದುರುದಾರರ ಬಲಗೈ ಬೆರಳುಗಳನ್ನು ದ್ರಾವಣದಲ್ಲಿ ಅದ್ದಿಸಿ ತೊಳೆಸಿದಾಗ, ಆ ದ್ರಾವಣವು ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ. ಇನ್ನೊಂದು ಬಟ್ಟಲಿನಲ್ಲಿದ್ದ ದ್ರಾವಣದಲ್ಲಿ ಎದುರುದಾರರ ಎಡಗೈ ಬೆರಳುಗಳನ್ನು ದ್ರಾವಣದಲ್ಲಿ ಅದ್ದಿಸಿ ತೊಳೆಸಿದಾಗ, ಆ ದ್ರಾವಣವು ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ. ಪ್ರತ್ಯೇಕವಾಗಿ ಆ ದ್ರಾವಣಗಳನ್ನು ತನಿಖಾಧಿಕಾರಿಯು ವಶಪಡಿಸಿಕೊಂಡಿರುತ್ತಾರೆ. ದೂರುದಾರರಿಂದ ಪಡೆದ ಹಣದ ಬಗ್ಗೆ ವಿಚಾರಿಸಿದಾಗ, ಎದುರುದಾರರು ಪ್ಯಾಂಟಿನ ಬಲಭಾಗದ ಜೇಬಿನಲ್ಲಿ ಇಟ್ಟುಕೊಂಡಿರುವುದಾಗಿ ತಿಳಿಸಿದ್ದು, ತನಿಖಾಧಿಕಾರಿಯ ಸೂಚನೆಯಂತೆ ಪಂಚಸಾಕ್ಷಿ-1 ಶ್ರೀ. ಬಿ.ಸಿ. ಚಿಕ್ಕಅಂಕೇಗೌಡರವರ ಮುಖಾಂತರ ಹಣವನ್ನು ಹೊರತೆಗೆಸಿ ಪರಿಶೀಲಿಸಲಾಗಿ, ಆ ನೋಟುಗಳ ಕ್ರಮ ಸಂಖ್ಯೆಗಳು ಪ್ರಾಯೋಗಿಕ ಪಂಚನಾಮೆಯಲ್ಲಿ ನಮೂದಿಸಿದ ನೋಟುಗಳ ಸಂಖ್ಯೆಗಳಿಗೆ ತಾಳೆಯಾಗಿದ್ದರಿಂದ, ಆ ನೋಟುಗಳನ್ನು ತನಿಖಾಧಿಕಾರಿಯವರು ವಶ ಪಡಿಸಿಕೊಂಡಿರುತ್ತಾರೆ. ತನಿಖಾಧಿಕಾರಿಯವರು ಎದುರುದಾರರಿಗೆ ಬದಲಿ ಪ್ಯಾಂಟಿನ ವ್ಯವಸ್ಥೆ ಮಾಡಿ ಎದುರುದಾರರು ಧರಿಸಿದ್ದ ಪ್ಯಾಂಟನ್ನು ಬಿಚ್ಚಿಸಿ, ಲಂಚದ ಹಣ ಇಟ್ಟಿದ್ದ ಪ್ಯಾಂಟಿನ ಬಲ ಜೇಬನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿಸಿದಾಗ, ಆ ದ್ರಾವಣವು ತಿಳಿ ಗುಲಾಬಿ ಬಣ್ಣಕ್ಕೆ ಬಂದಿರುತ್ತದೆ. ಆ ದ್ರಾವಣವನ್ನು ಮತ್ತು ಸದರಿ ಪ್ಯಾಂಟನ್ನು ತನಿಖಾಧಿಕಾರಿಯವರು ವಶಕ್ಕೆ ಪಡೆದಿರುತ್ತಾರೆ. ನಂತರ ದೂರುದಾರರ ಬಳಿ ಇದ್ದ ಸೋನಿ ಕಂಪನಿಯ ವಾಯ್ಸ್ ರೆಕಾರ್ಡರ್‌ನಲ್ಲಿದ್ದ ಸಂಭಾಷಣೆಗಳನ್ನು ಸಿ.ಡಿ.ಗೆ ವರ್ಗಾಯಿಸಿದ್ದು ಮತ್ತು ಎದುರುದಾರರ ಮಾದರಿ ಧ್ವನಿಯನ್ನು ಸಹ ಪಡೆದು ಆ ಧ್ವನಿಯನ್ನು ಎರಡು ಸಿ.ಡಿ.ಗಳಿಗೆ ವರ್ಗಾಯಿಸಿ, ಆ ಸಿ.ಡಿ.ಗಳನ್ನು ತನಿಖಾಧಿಕಾರಿಯವರು ವಶಪಡಿಸಿಕೊಂಡಿರುತ್ತಾರೆ. ನಂತರ ಎದುರುದಾರರ ಬಳಿ ದೊರೆತ ಹಣದ ಬಗ್ಗೆ ವಿಚಾರಿಸಿದಾಗ ಎದುರುದಾರರು ಸಮಜಾಯಿಷಿ ಬರೆದುಕೊಟ್ಟಿದ್ದು, ಸದರಿ ಸಮಜಾಯಿಷಿಯಲ್ಲಿ "ಪುರಸಭೆ ಬಂಗಾರಪೇಟೆ ಕಾರ್ಯಾಲಯದಲ್ಲಿ ಕಾರ್ಯ ನಿರ್ವಹಿಸುತ್ತಿರುವಾಗ ತನಿಖಾಧಿಕಾರಿಯವರು ಲಂಚ ಪಡೆದಿದ್ದೀಯಾ ಎಂದು ತನಿಖೆ ಪ್ರಾರಂಬಿಸಿದ್ದು, ಆಗ ದೂರುದಾರರು

ಲೈಸನ್ಸ್ ಮರುನೋಂದಣಿಮಾಡಲು ಸರ್ಕಾರಿ ಫೀಸ್ ಎಂದು ಪಡೆದಿರುವುದು ಸತ್ಯ ಎಂದು ಈ ಮೂಲಕ ದೃಢೀಕರಿಸುತ್ತೇನೆ" ಎಂದು ಬರೆದುಕೊಟ್ಟಿರುತ್ತಾರೆ. ಸದರಿ ಹೇಳಿಕೆಗೆ ದೂರುದಾರರು ಮತ್ತು ಪಂಚಸಾಕ್ಷಿ-1 ರವರು ಎದುರುದಾರರು ಲಂಚದ ಹಣಕ್ಕಾಗಿ ಬೇಡಿಕೆ ಇಟ್ಟು ಪಡೆದಿರುತ್ತಾರೆಂದು ತಿಳಿಸಿರುತ್ತಾರೆ. ಎದುರುದಾರರು ನೀಡಿದ ಸಮಜಾಯಿಷಿಯು ತೃಪ್ತಿದಾಯಕವಾಗಿರುವುದಿಲ್ಲ. ತನಿಖಾಧಿಕಾರಿಯವರು ಸವಿಸ್ತಾರ ಜಪ್ತಿ ಪಂಚನಾಮೆಯನ್ನು ಪೂರೈಸಿದ ನಂತರ ಎದುರುದಾರರನ್ನು ದಸ್ತಗಿರಿ ಮಾಡಿರುತ್ತಾರೆ. ನಂತರ ತನಿಖಾಧಿಕಾರಿಯವರು ಸಾಕ್ಷಿದಾರರ ಹೇಳಿಕೆ, ತನಿಖಾ ದಾಖಲೆಗಳನ್ನು ಮತ್ತು ರಾಸಾಯನಿಕ ತಜ್ಞರ ವರದಿಯನ್ನು ಮತ್ತು ಅಭಿಯೋಜನಾ ಮಂಜೂರಾತಿಯನ್ನು ಪಡೆದು ಎದುರುದಾರರ ವಿರುದ್ಧ ದೋಷಾರೋಪಣ ಪತ್ರವನ್ನು ಸಲ್ಲಿಸಿರುತ್ತಾರೆ.

3. ಎದುರುದಾರರಿಂದ ಪರಿವೀಕ್ಷಣಾ ಟಿಪ್ಪಣಿಗೆ ಸಮಜಾಯಿಷಿ ಕೇಳಲಾಗಿತ್ತು. ಎದುರುದಾರರು ದಿ: 22/09/2021ರಂದು ಆಕ್ಷೇಪಣೆಯನ್ನು ಈ ಕಚೇರಿಗೆ ಸಲ್ಲಿಸಿರುತ್ತಾರೆ. ಸದರಿ ಆಕ್ಷೇಪಣೆಯಲ್ಲಿ ಪರಿವೀಕ್ಷಣಾ ಟಿಪ್ಪಣಿಯ ಎಲ್ಲಾ ಅಂಶಗಳನ್ನು ಅಲ್ಲಗಳೆದಿರುತ್ತಾರೆ ಮತ್ತು ಅವರ ಆಕ್ಷೇಪಣೆಯಲ್ಲಿ ಅವರ ಮೇಲಿರುವ ಕ್ರಿಮಿನಲ್ ಮೊಕದ್ದಮೆ ಇತ್ಯರ್ಥವಾಗುವವರೆಗೂ ಇಲಾಖಾ ವಿಚಾರಣೆಯನ್ನು ಮುಂದೂಡಲು ಕೋರಿರುತ್ತಾರೆ ಹಾಗೂ ಕ್ರಿಮಿನಲ್ ಮೊಕದ್ದಮೆ ಇತ್ಯರ್ಥದಲ್ಲಿರುವುದರಿಂದ, ಇಲಾಖಾ ವಿಚಾರಣೆಗೆ ಅವಕಾಶವಿಲ್ಲವೆಂದು ಆ ಕಾರಣ, ಈ ಪ್ರಕರಣವನ್ನು ಸ್ಥಗಿತಗೊಳಿಸಲು ಕೋರುತ್ತಾ ತೀರ್ಪುಗಳ ಸಾರಾಂಶವನ್ನು ತಿಳಿಸಿರುತ್ತಾರೆ ಮತ್ತು ಲಂಚದ ಹಣಕ್ಕೆ ಬೇಡಿಕೆ ಇಟ್ಟಿರುವುದಿಲ್ಲ ಹಾಗೊ ದೂರುದಾರರಿಂದ ಯಾವುದೇ ಹಣ ಪಡೆದಿರುವುದಿಲ್ಲ ಮತ್ತು ದೂರುದಾರರು ಧ್ವನಿಮುದ್ರಿಸಿಕೊಂಡ ಸಂಭಾಷಣೆಯ ಬಗ್ಗೆ ಮಾಹಿತಿ ಇರುವುದಿಲ್ಲವೆಂದು ತಿಳಿಸಿರುತ್ತಾರೆ. ಎದುರುದಾರರು ನೀಡಿದ ಸಮಜಾಯಿಷಿಯು ಸಮಂಜಸವಾಗಿರುವುದಿಲ್ಲ. ರಾಸಾಯನಿಕ ತಜ್ಞರ ವರದಿಯಲ್ಲಿ ತನಿಖಾಧಿಕಾರಿಯವರು ಎದುರುದಾರರಿಂದ ವಶಪಡಿಸಿಕೊಂಡ ಮುದ್ದೆಮಾಲುಗಳಲ್ಲಿ ಫಿನಾಪ್ತಲಿನ್ ಅಂಶವಿರುವುದು ಕಂಡುಬಂದಿದ್ದರಿಂದ, ಎದುರುದಾರರ ಆಕ್ಷೇಪಣೆಯ ಅಂಶಗಳ ಮೇರೆಗೆ ಪ್ರಕರಣವನ್ನು ಮುಕ್ತಾಯಗೊಳಿಸಲು ಸೂಕ್ತ ಕಾರಣಗಳಾಗಿ ಕಂಡುಬರುವುದಿಲ್ಲ.

4. ದೂರು ಅರ್ಜಿ, ಸಾಕ್ಷಿದಾರರ ಹೇಳಿಕೆಗಳು, ತನಿಖಾಧಿಕಾರಿ ಸಂಗ್ರಹಿಸಿದ ದಾಖಲೆಗಳು, ರಾಸಾಯನಿಕ ತಜ್ಞರ ಪರೀಕ್ಷಾವರದಿ ಹಾಗೂ ದೋಷಾರೋಪಣ ಪತ್ರದಲ್ಲಿರುವ ಮಾಹಿತಿಗಳಿಂದ ಎದುರುದಾರರು ನೀಡಿರುವ ಉತ್ತರಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿ, ಎದುರುದಾರರ ವಿರುದ್ಧ ನಡೆವಳಿಯನ್ನು ಕೈಬಿಡಲು

ಸೂಕ್ತ / ಸಮಂಜಸ / ಸಮಾಧಾನಕರ ಕಾರಣ ತೋರಿಸಿಲ್ಲವೆಂದು ಅಭಿಪ್ರಾಯಕ್ಕೆ ಬರಲಾಗಿದೆ.

5. ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 2 (12) ರ ಪ್ರಕಾರ ಎದುರುದಾರರು ಸರ್ಕಾರಿ / ಸಾರ್ವಜನಿಕ ನೌಕರರಾಗಿದ್ದು, ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ಕರ್ತವ್ಯದಲ್ಲಿ ನಿಷ್ಠೆ ತೋರಿಸದೆ ಭ್ರಷ್ಟಾಚಾರವೆಸಗಿ ಕ.ನಾ.ಸೇ. (ನಡತೆ) ನಿಯಮಗಳು 1966 ನಿಯಮ 3 (1)(i) ರಿಂದ (iii) (ಪ್ರಸ್ತುತ ಕ.ನಾ.ಸೇ. (ನಡತೆ) ನಿಯಮಗಳು 2021 ನಿಯಮ (i) ರಿಂದ (iv)) ರನ್ವಯ ದುರ್ನಡತೆಯನ್ನು ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ. ಎದುರುದಾರರ ವಿರುದ್ಧ ಇಲಾಖಾ ವಿಚಾರಣೆ ಮಾಡಲು ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957 ನಿಯಮ 14(ಎ)ರಡಿ ವಿಚಾರಣೆ ನಡೆಸಲು ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3) ರಡಿ ಪ್ರದತ್ತವಾದ ಅಧಿಕಾರದಡಿ ಈ ವರದಿ ಮೂಲಕ ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

6. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4) ರ ಪ್ರಕಾರ ಸಕ್ಷಮ ಪ್ರಾಧಿಕಾರವು ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ, ಈ ವರದಿಯನ್ನು ಸ್ವೀಕರಿಸಿದ ಮೂರು ತಿಂಗಳೊಳಗೆ ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

13/12/21

(ನ್ಯಾಯಮೂರ್ತಿ ಬಿ.ಎಸ್. ಪಾಟೀಲ್)
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ, ಬೆಂಗಳೂರು.